O.S .No.118/2019
PW-1

ದಿನಾಂಕ: 06.04.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ.ಎ.ಎಸ್. ವಕೀಲರಿಂದಃ

ನನ್ನ ತಾತನ ಹೆಸರು ರಾಮಯ್ಯ @ ಕರ್ಪಯ್ಯ. ಸಾಕ್ಷಿಗೆ ತನ್ನ ಪರ ಗುರುತಿಸಿಕೊಂಡ ದಾಖಲಾತಿಗಳನ್ನು ತೋರಿಸಿ, ಅದರಲ್ಲಿ ತಾತನ ಹೆಸರು ರಾಮಯ್ಯ @ ಕರ್ಪಯ್ಯ ಎಂದು ತೋರಿಸಲು ಯಾವ ದಾಖಲಾತಿ ಹಾಜರುಪಡಿಸಿದ್ದೀರಿ ಎಂದು ಗುರುತಿಸುವಂತೆ ಕೇಳಿದ್ದು, ನನಗೆ ಓದಲು ಬರುವುದಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಾತನ ಹೆಸರು ಕರ್ಪಯ್ಯ ಎಂದರೆ ಸಾಕ್ಷಿ ರಾಮಯ್ಯ @ ಕರ್ಪಯ್ಯ ಎರಡೂ ಹೆಸರು ಎಂದು ಹೇಳುತ್ತಾರೆ.

1980-81 ರಲ್ಲಿ ಸಾಗುವಳಿ ನನ್ನ ತಂದೆಯ ಹೆಸರಿನಲ್ಲಿ ನೀಡಲಾಗಿದೆ. ಸಾಗುವಳಿ ನೀಡಿದ ಬಗ್ಗೆ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನೀವು ಬೆಳವಾಡಿಯಲ್ಲಿ ವಾಸ ಇರುವುದು ಎಂದರೆ ಸರಿ. ನೀವು ಹುಟ್ಟಿ ಬೆಳದಿದ್ದು ಬೆಳವಾಡಿಯಲ್ಲಿಯಲ್ಲಿ ಎಂದರೆ ಸಾಕ್ಷಿ ಪೆಂಜಳ್ಳಿ ಎಂದು ಹೇಳುತ್ತಾರೆ. ನೀವು ಪೆಂಜಳ್ಳಿಯಲ್ಲಿ ಇದ್ದ ಬಗ್ಗೆ ದಾಖಲಾತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆಗೆ ನಿಮಗೆ ಎಷ್ಟು ವಯಸ್ಸಾದಾಗ ಸಾಗುವಳಿ ನೀಡಲಾಯಿತು ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಗಳು ಪೆಂಜಳ್ಳಿಯಲ್ಲಿ ವಾಸ ಎಂದರೆ ಸರಿ.

1 ನೇ ಪ್ರತಿವಾದಿಗೆ ಸ.ನಂ.1 ರಲ್ಲಿ 2 ಎಕರೆ 30 ಗುಂಟೆ ಜಮೀನನ್ನು ಸಾಗುವಳಿ ನೀಡಲಾಗಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಅವರ ಹೆಸರಿಗೆ ಖಾತೆಯಾದ ನಂತರ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತಾರೆಂದರೆ ಸಾಕ್ಷಿ ನನ್ನ ತಂದೆಗೆ ಮೋಸ ಮಾಡಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ನಿಮ್ಮ ತಂದೆಗೆ ಮೋಸ ಮಾಡಿ ಸಾಲ ಪಡೆದಿದ್ದಾರೆಂದು ಪ್ರತಿವಾದಿಗಳ ಮೇಲೆ ಕ್ರಮ ಕೈಗೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ 1 ನೇ ಪ್ರತಿವಾದಿ ಮುತ್ತಯ್ಯ ರವರಿಗೆ ಸಾಗುವಳಿ ನೀಡಿರುವುದು ಎಂದರೆ ಸರಿ. 1 ನೇ ಪ್ರತಿವಾದಿ ಅವರ ಹೆಸರಿಗೆ ಸಾಗುವಳಿಯಾದ ನಂತರ ಖಾತೆ ಮಾಡಿಸಿಕೊಂಡಿರುತ್ತಾರೆಂದರೆ ಸಾಕ್ಷಿ ನನ್ನ ತಂದೆಗೆ ಮೋಸ ಮಾಡಿ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ.

ನಿಮ್ಮ ತಾಯಿಗೆ ಖಾತೆ ವರ್ಗಾವಣೆ ಯಾವ ಸಾಲಿನಲ್ಲಿ ಆಯಿತೆಂದರೆ ಸಾಕ್ಷಿ 2022 ಎಂದು ಹೇಳುತ್ತಾರೆ. ನಿಮ್ಮ ತಾಯಿಗೆ ದಾವಾ ಆಸ್ತಿ ಯಾವ ಆಧಾರದ ಮೇಲೆ ಖಾತೆ ಆಯಿತೆಂದರೆ ಸಾಕ್ಷಿ ದರಕಾಸ್ತು ಮೇರೆಗೆ ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ನಿಮ್ಮ

ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ದಾವಾ ಆಸ್ತಿಗೆ ತಾವೇ ಹಕ್ಕುದಾರರು ಹಾಗೂ ಈ ದಾವೆಯ ವಾದಿ ತೊಂದರೆ ಕೊಡುತ್ತಿದ್ದಾರೆಂದು ನಿಮ್ಮ ವಿರುದ್ಧ ಅಸಲು ದಾವೆ ನಂ.113/2019 ರಂತೆ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆಂದರೆ ಸಾಕ್ಷಿ ನಾವು ಈ ದಾವೆ ಹೂಡಿದ ನಂತರ ಹೂಡಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ತಾಯಿಯ ಹೆಸರಿಗೆ ಖಾತೆ ವರ್ಗಾವಣೆಯಾದ್ದುದ್ದನು ಕೂಲಂಕುಷವಾಗಿ ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಹೇಳುತ್ತಾರೆ. ನಿಪಿ-3 ರಂತೆ ದಾವಾ ಆಸ್ತಿ ತಾಯಿಯ ಹೆಸರಿಗೆ ಹಕ್ಕು ಬಿಡುಗಡೆ ಮತ್ತು ವರ್ಗಾವಣೆ ಪತ್ರದಂತೆ ಖಾತೆಯಾಗಿದೆ ಎಂದು ನಮೂದು ಇದೆ ಎಂದರೆ ಸರಿ. ನಿಪಿ-3 ರಲ್ಲಿ ನಮೂದಿಸಿರುವ ನೊಂದಣಿ ಪತ್ರದ ಸಂಖ್ಯೆ ಸ್ವಾಮಿ @ ಸ್ವಾಮಯ್ಯ ಎಂಬುವವರು ಅವರಿಗೆ ಸೇರಿದ ಆಸ್ತಿಗಳ ಬಗ್ಗೆ ಎಸ್.ಬಿ.ಐ ರವರಿಗೆ ಕನ್ವೆಯನ್ಸ್ ಡಿಡ್ ಬರೆದುಕೊಟ್ಟ ದಾಖಲಾತಿ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ನಮೂದಿಸಿರುವ ನೊಂದಣಿ ಸಂಖ್ಯೆಗೂ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಿಪಿ-4 ಕ್ಕೆ ಸಾಕ್ಷಿದಾರರಾಗಿ ಯಾರು ಸಹಿ ಮಾಡಿದ್ದಾರೆಂದರೆ ಸಾಕ್ಷಿ ಮಹಾದೇವ ಮತ್ತು ನಾನು ಸಾಕ್ಷಿದಾರರಾಗಿದ್ದೇವೆ ಎಂದು ಹೇಳುತ್ತಾರೆ. ಮಹಾದೇವ ಮತ್ತು ನೀವು ಆತ್ಮೀಯರು ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರನ್ನು ದುರುಪಯೋಗಪಡಿಸಿಕೊಂಡು ನಿಪಿ-4 ನ್ನು ಸೃಷ್ಟಿಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ನಿಮ್ಮ ತಂದೆ ಮೊದಲು ಹುಣಸೂರು ತಾಲ್ಲೂಕು, ಹನಗೋಡು ಹೋಬಳಿ, ಬೀರನಹಳ್ಳಿಯಲ್ಲಿ ವಾಸ ಇದ್ದರು ಎಂದರೆ ಸರಿ. ನಿಮ್ಮ ತಂದೆಗೆ ಬೀರನಹಳ್ಳಿಯ ಸ.ನಂ.42 ರಲ್ಲಿ 2 ಎಕರೆ ಜಮೀನು ಮಂಜೂರು ಆಗಿತ್ತು ಎಂದರೆ ಸರಿ. ಸದರಿ ಜಮೀನನ್ನು ನೀವು ಬೇರೆದವರಿಗೆ ಗುತ್ತಿಗೆ ಕೊಟ್ಟು ವ್ಯವಸಾಯ ಮಾಡಿಸುತ್ತಿದ್ದೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವೇ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ನಿಮ್ಮ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ನಿಪಿ-8 ರಲ್ಲಿ ಮುತ್ತಯ್ಯ @ ಪಟ್ಟಯ್ಯ ಬಿನ್ ರಾಮಯ್ಯ ಎಂದು ನಮೂದು ಇದ್ದು, ಕರ್ಪಯ್ಯ ಎಂದು ನಮೂದು ಇಲ್ಲ ಎಂದರೆ ಸರಿ. ನಿಡಿ-8, 1 ನೇ ಪ್ರತಿವಾದಿಗೆ ಸಂಬಂಧಪಟ್ಟದ್ದು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಂದೆ ಹೆಸರು ರಾಮಯ್ಯ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯ ತಂದೆ ಹೆಸರು ರಾಮಯ್ಯ

ಎಂದು ನಿಮಗೆ ಗೊತ್ತಿದ್ದರೂ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಿಮ್ಮ ತಾಯಿ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡ ನಂತರ 1 ನೇ ಪ್ರತಿವಾದಿ ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಆರ್.ಎ.121/2019 ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿ 1 ನೇ ಪ್ರತಿವಾದಿ ಪರವಾಗಿ ದಿಃ 31.12.2020 ರಂದು ಆದೇಶವಾಗಿ, ನಿಮ್ಮ ತಾಯಿಗಾದ ಖಾತೆಯನ್ನು ರದ್ದು ಪಡಿಸಿರುತ್ತಾರೆಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನೀವಾಗಲೀ, ನಿಮ್ಮ ತಂದೆಯಾಗಲೀ, ನಿಮ್ಮ ತಾಯಿಯಾಗಲೀ ಯಾವತ್ತೂ ಸ್ವಾಧೀನ ಇಲ್ಲ, ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಈಗಲೂ ಸಹ ಪ್ರತಿವಾದಿಗಳೇ ಸ್ವಾಧೀನ ಇದ್ದು, ಅವರೇ ಸಂಪೂರ್ಣ ಹಕ್ಕುದಾರರು ಎಂದರೆ ಸರಿಯಲ್ಲ. ನಿಪಿ-10 ರಿಂದ 12 ಕಂದಾಯ ರಶೀದಿಗಳನ್ನು ಯಾರು ಬೇಕಾದರೂ ಯಾರ ಹೆಸರಿಗೆ ಕಂದಾಯ ಪಾವತಿ ಮಾಡಬಹುದು ಎಂದರೆ ಸರಿಯಲ್ಲ. ನಿಪಿ-4 ರಂತೆ ಹಕ್ಕು ಖುಲಾಸೆ ಮಾಡಿಸಿಕೊಂಡ ನಂತರ ಕಂದಾಯ ಕಟ್ಟಿರುತ್ತೇನೆ, ಅದಕ್ಕಿಂತ ಪೂರ್ವದಲ್ಲಿ ಕಟ್ಟಿಲ್ಲ. ನಿಪಿ-4 ರಂತೆ ಹಕ್ಕು ಖುಲಾಸೆ ಸೃಷ್ಟಿಯಾದ ನಂತರ ಅದಕ್ಕೆ ಪೂರಕವಾಗಲೀ ಎಂಬ ಕಾರಣಕ್ಕೆ ದಾವೆ ಹೂಡಿದ ನಂತರ ನಿಪಿ-10 ರಿಂದ 12 ನ್ನು ಕಟ್ಟಿರುತ್ತೀರಿ ಎಂದರೆ ಸಾಕ್ಷಿ ಸೃಷ್ಟಿ ಮಾಡಿಲ್ಲ, ನನ್ನ ತಂದೆಯ ಹೆಸರನಲ್ಲಿತ್ತು, ನಾನು ಕಟ್ಟಿದ್ದೇನೆ ಎಂದು ಹೇಳುತ್ತಾರೆ. ನೀವು ಕಂದಾಯ ಕಟ್ಟಿದಾಗ ಖಾತೆ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ನನ್ನ ತಾಯಿಯ ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡು ದಾವಾ ಆಸ್ತಿ ನಮಗೆ ಸೇರಬೇಕೆಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಯಾವ ದಿನಾಂಕ, ತಿಂಗಳು, ವರ್ಷದಂದು ತೊಂದರೆ ಕೊಟ್ಟರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಗಳ ಜಮೀನಿಗೆ ದಾವೆ ಹೂಡಿ ನೀವೇ ತೊಂದರೆ ಕೊಡುತ್ತಿದ್ದು, ಪ್ರತಿವಾದಿಗಳೇ ದಾವಾ ಆಸ್ತಿಯ ಸಂಪೂರ್ಣ ಹಕ್ಕುದಾರರು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.